# ಬಾರೊ ಮುನಿಸೇತಕೆ ಭಾವಜನಯ್ಯ

**Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 93

ರಾಗ: ಸಾವೇರಿ ತಾಳ: ಅಟ

ಬಾರೊ ಮುನಿಸೇತಕೆ ಭಾವಜನಯ್ಯ ॥ ಪ ॥

ಮಾವನಳಿಯನೆ ಬಾರೊ ಭಾವ ತನಯನೆ ಬಾರೊ
ಮಾವನ ಮಡದಿಯ ಮಗಳ ಸೊಸೆಯ ಗಂಡ ॥ 1 ॥

ಅತ್ತಿಗೆ ಮೈದುನನೆ ಬಾರೊ ಅತ್ತಿಗೆಯ ಮಗಳ ಗಂಡ
ಮತ್ತೆ ಮೇಲೆ ಅತ್ತಿಗೆಯ ಪುತ್ರಿಯ ಮುದ್ದಾಡುತ ॥ 2 ॥

ಅಂಬುಜನಯನನೆ ಬಾರೊ ಆದಿಮೂಲನೆ ಬಾರೊ
ಕಂಬದಿಂದೊಡೆದು ಬಂದ ಪುರಂದರ ವಿಠಲಯ್ಯ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇನ್ನೊಬ್ಬ ಗೋವಳಿತಿ ಹುಸಿಮುನಿಸಿನಿಂದಿದ್ದ ಕೃಷ್ಣನನ್ನು ಸಂತವಿಟ್ಟು ಕರೆಯುತ್ತಾಳೆ.

**ಮಾವನ ಅಳಿಯ** = ಕಂಸನ ತಂಗಿಯ ಮಗ

**ಭಾವನ ತನಯ** = ಕಂಸನಿಗೆ ಭಾವನಾದ ವಸುದೇವನ ಮಗ

**ಮಾವನ ಮಡದಿಯ** = ವಸುದೇವನ ಮಾವನಾದ ದೇವಕನ ಹೆಂಡತಿಯ

**ಮಗಳ** = ಹೆಂಡತಿಯ

**ಸೊಸೆಯ** = ರುಕ್ಮಿಣಿಯ

**ಅತ್ತಿಗೆಯ ಮೈದುನ** = ರೇವತೀ ದೇವಿಯ ಮೈದುನ

**ಅತ್ತಿಗೆಯ ಮಗಳ ಗಂಡ** = ದೇವಕಿಯ ಅತ್ತಿಗೆಯಾದ ರಾಜಾಧಿ ದೇವಿಯ ಮಗಳಾದ ಮಿತ್ರವಿಂದಾ ಎಂಬವಳ ಗಂಡ

**ಅತ್ತಿಗೆಯ ಪುತ್ರಿಯ** = ವಸುದೇವನ ತಂಗಿಯಾದ ಶ್ರುತಕೀರ್ತಿಯ ಮಗಳ

**Classification:** Mundige
**Ankita:** purandara vittala
**Location:** NA
**Category:** Krishna Leele
**Sub-Category:** Krishna, kamsa, Rukmini, pati, Devaki, tangi,
**Pravachana:** NA
**Explanation:** NA